India Media Monitor

# Vijayavani

## Equalize UG and PG seats

**Date: 27/08/2013 | Edition: Bangalore | Page: 5 | Source: Bureau | Clip size (cm): W: 16 H: 10**

**Clip: 1 of 1**

# ಮೆಡಿಕಲ್ ಸೀಟು ಏಕರೂಪ ಹಂಚಿಕೆಗೆ ಆಗ್ರಹ

## ■ ಸೇವ್ ಡಾಕ್ಟರ್ಸ್ ಸಂಘಟನೆಯಿಂದ ಜಾಥಾ ■ ನಿಯಮ ಬದಲಿಸಲು ಮನವಿ

**ಬೆಂಗಳೂರು:** ದೇಶದಲ್ಲಿ ತಜ್ಞ ವೈದ್ಯರ ಕೊರತೆ ನಿವಾರಿಸಲು ಕೇಂದ್ರ ಸರ್ಕಾರ ವೈದ್ಯಕೀಯ ಪದವಿ ಹಾಗೂ ಸ್ನಾತಕೋತ್ತರ ಪದವಿಗೆ ಏಕರೂಪದ ಸೀಟು ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿ ಸೇವ್ ಡಾಕ್ಟರ್ಸ್ ಸಂಘಟನೆ ಬೃಹತ್ ಜಾಥಾ ನಡೆಸಿತು.

ಸೋಮವಾರ ನಗರದ ಮಣಿಪಾಲ್ ಸೆಂಟರ್‌ನಿಂದ ಬಾಲಭವನದವರೆಗೆ ಪ್ರತಿಭಟನಾ ಜಾಥಾ ನಡೆಸಲಾಯಿತು.

ವೈದ್ಯಕೀಯ ಪದವಿಗೆ ನೀಡುವಷ್ಟೇ ಸೀಟುಗಳನ್ನು ಸ್ನಾತಕೋತ್ತರಕ್ಕೂ ನೀಡಬೇಕು. ತಜ್ಞ ವೈದ್ಯರ ಕೊರತೆ ನಿವಾರಿಸಲು ವೈದ್ಯಕೀಯ ಶಿಕ್ಷಣ ಪದ್ಧತಿಯ ನಿಯಮ ಬದಲಿಸಬೇಕು ಎಂದು ವೈದ್ಯಾಧಿಕಾರಿ ಡಾ. ನರೇಶ್ ತೆಹ್ರಾನ್ ಕೇಂದ್ರವನ್ನು ಒತ್ತಾಯಿಸಿದರು. ದೇಶದಲ್ಲಿ ಸುಮಾರು 46,600 ವೈದ್ಯಕೀಯ ಪದವಿ ಸೀಟುಗಳಿವೆ. ಆದರೆ, ಸ್ನಾತಕೋತ್ತರ ಪದವಿಗೆ ಕೇವಲ 12 ಸಾವಿರ ಸೀಟುಗಳನ್ನು ಮಾತ್ರ ಕೇಂದ್ರ ಸರ್ಕಾರ ಮೀಸಲಿಟ್ಟಿದೆ. ಪ್ರತಿವರ್ಷ 90 ಸಾವಿರ ವೈದ್ಯಕೀಯ ಪದವಿ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳು 12 ಸಾವಿರ ಸೀಟುಗಳಿಗಾಗಿ ಸ್ಪರ್ಧೆ ಮಾಡುವಂತಾಗಿದೆ. ಇದರ ನಿವಾರಣೆಗೆ ಕೇಂದ್ರ ಕ್ರಮಕ್ಕೆ ಮುಂದಾಗಬೇಕು ಎಂದು ಡಾ. ನವನೀತ್ ಮೊಟ್ರೇಜಾ ಒತ್ತಾಯಿಸಿದರು.

ಐಎಂಎ ಪ್ರಧಾನ ಕಾರ್ಯದರ್ಶಿ ಡಾ.ನರೇಂದ್ರ ಸೈನಿ, ಡಾ. ದೇವಿ ಪ್ರಸಾದ್ ಶೆಟ್ಟಿ ಸೇರಿ ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.




**ಏಕರೂಪ ಮೆಡಿಕಲ್ ಸೀಟು ಹಂಚಿಕೆಗೆ ಒತ್ತಾಯಿಸಿ ಸೇವ್ ಡಾಕ್ಟರ್ಸ್ ಸಂಘಟನೆಯ ಸದಸ್ಯರು ಸೋಮವಾರ ಬೃಹತ್ ಜಾಥಾ ನಡೆಸಿದರು.**